ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ .

**ಸಿ.ಸಿ. ನಂ. 166 / 2019**

ಪಿಡಬ್ಲ್ಯೂಃ **7**
ಪಿಡಬ್ಲ್ಯೂಃ**2**

ದಿನಾಂಕಃ **13-11-2025**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರು - ದತ್ತಾತ್ರೇಯ
ತಂದೆ ಹೆಸರು - ಪ್ರಸನ್ನ
ವಯಸ್ಸು - **62** ವರ್ಷ
ಉದ್ಯೋಗ - ನಿವೃತ್ತ ಆರಕ್ಷಕ ಉಪ ನಿರೀಕ್ಷಕರು
ವಾಸಸ್ಥಳಃ - ಯಾದಗಿರಿ

ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕರಿಂದಃ

ದಿನಾಂಕ 06.12.2016 ರಿಂದ 08.01.2021 ರವರೆಗೆ ನಾನು ಸಹಾಯಕ ಆರಕ್ಷಕ ಉಪ ನಿರೀಕ್ಷಕನಾಗಿ ಯಾದಗಿರಿ ಮಹಿಳಾ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 31.08.2019 ರಂದು ಸಂಜೆ 07.15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಕನ್ನಡದಲ್ಲಿ ಗಣಕೀಕರಣ ಮಾಡಿದ ದೂರನ್ನುನೀಡಿದ್ದರು. ಅದನ್ನು ಸ್ವೀಕರಿಸಿಕೊಂಡು ಠಾಣೆಯ ಪ್ರಕರಣ ನಂ. 28/2019 ಭಾ.ದಂ.ಸಂ. ಕಲಂ.323,504,506,354 ಸಹವಾಚಕ ಕಲಂ 34 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದೆ. ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಅದರ ಪ್ರತಿಗಳನ್ನು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೆ. ದಿನಾಂಕ 01.09.2019 ರಂದು ಬೆಳ್ಳಿಗ್ಗೆ 09.45 ಗಂಟೆಯಿಂದ 10.45 ಗಂಟೆಯವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ಭಾವಚಿತ್ರವನ್ನು ತೆಗೆದಿದ್ದೆ. ಚಾಸಾ-4 ಮತುತ 5 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆ. ದಿನಾಂಕ 06.09.2019 ರಂದು ಚಾಸಾ-6 ರವರನ್ನು ಆರೋಪಿತರನ್ನು ಶೋಧನೆ ಮಾಡಲು ನೇಮಿಸಿದ್ದೆ. ನಂತರ ಅವರು ಆರೋಪಿತರು ದೊರೆತಿರುವುದಿಲ್ಲ ಎಂದು ವರದಿಯನ್ನು ನನಗೆ ನೀಡಿದ್ದರು. ದಿನಾಂಕ 16.09.2019 ರಂದು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಲಯದಿಂದ ಆರೋಪಿತರು ನಿರೀಕ್ಷಣಾ ಜಾಮೀನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿದ್ದರು. ಮಾನ್ಯ ನ್ಯಾಯಲಯದ ಆದೇಶದ ಮೇರೆಗೆ ಸೂಕ್ತ ಭಾದ್ರತೆಯನ್ನು ಪಡೆದುಕೊಂಡು ಆರೋಪಿತರನ್ನು ಬಿಡುಗಡೆ ಮಾಡಿದ್ದರು. ದಿನಾಂಕ 16.09.2019 ರಂದು ಮಾನ್ಯ ನ್ಯಾಯಲಯಕ್ಕೆ ದೋಷಾರೋಪ

ಪಟ್ಟಿಯನ್ನು ಸಲ್ಲಿಸಿರುತೇನೆ. ಸಾಕ್ಷಿಯು ದೂರನ್ನು ನೀಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸಾಕ್ಷಿಯ ಪ್ರವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಗುನ್ನೆ ಸ್ಥಳದ ಪಂಚನಾವೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ದಿನಾಂಕ 06.09.2019 ಹಾಗೂ 14.09.2019 ರ ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-6, ಮತ್ತು 6 ಎ ಹಾಗೂ 7, 7 ಎ ಎಂದು ಗುರುತಿಸಲಾಯಿತು . ಆರೋಪಿತರನ್ನು ನೋಡಿದರೆ ನಾನು ಗುರುತಿಸುತೆತೀನೆ. ಅವರು ಈಗ ನಾಯಾಲಯದಲ್ಲಿ ಹಾಜರು ಇರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಾದ ಃ ಶ್ರೀ. ಎಸ್.ಕೆ. ರವರಿಂದಃ</u>

ಚಾಸಾ-1 ರವರು ದೂರನ್ನು ನೀಡುವಾಗ ನಾನೇ ಠಾಣಾಧಿಕಾರಿಯಾಗಿದ್ದೆ. ಚಾಸಾ-1 ರವರ ಜೊತೆಗೆ ಬೇರೆ ಯಾರು ಬಂದಿರಲಿಲ್ಲ. ಘಟನೆಯಾದ ಎರಡು ದಿನಗಳ ನಂತರ ಚಾಸಾ-1 ರವರು ದೂರನ್ನು ನೀಡಿದ್ದರು. ಚಾಸಾ-1 ರವರು ದೂರನ್ನು ನೀಡಲು ತಡ ಕಾರಣವನ್ನು ದೂರಿನಲ್ಲಿ ಬರೆದಿರುವುದಿಲ್ಲ. ಪಂಚನಾಮೆ ಮಾಡಲು ನಾನು ಹಾಗೂ ಚಾಸಾ-2 ಮತ್ತು 3 ರವರು ಹೋಗಿದ್ದೆವು. ಸಾಕ್ಷಿಯು ಮುಂದುವರೆದು ಚಾಸಾ-1 ರವರು ಸಹಾ ಬಂದಿದ್ದರು ಎಂದು ಹೇಳುತ್ತಾರೆ. ನಾನು, ಚಾಸಾ-1 ರಿಂದ 3 ರವರು ಮಾತ್ರ ಪಂಚನಾಮೆ ಮಾಡಲು ಹೋಗಿದ್ದೆವು. ಚಾಸಾ-2 ಮತ್ತು 3 ರವರನ್ನು ನಾನೇ ಕರೆದುಕೊಂಡು ಬಂದಿದ್ದೆ ಅವರು ಯಾದಗಿರಿಯಲ್ಲಿ ಬಂದಿದ್ದರು. ನಿಪಿ-1 ಅನ್ನು ನಾನೇ ಬರೆದಿದ್ದೆ. ನಿಪಿ-1 ಅನ್ನು ನಾನೇ ಬರೆದಿರುತ್ತೇನೆಂದು ಅದರಲ್ಲಿ ಬರೆದಿರುವುದಿಲ್ಲ. ನಿಪಿ-2 ಮತ್ತು 3 ಅನ್ನು ನಮ್ಮ ಸಿಬ್ಬಂದಿಯವರು ತೆಗೆದಿದ್ದರು. ನಮ್ಮ ಸಿಬ್ಬಂದಿಯವರ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಿಪಿ-2 ಮತ್ತು 3 ಅನ್ನು ಮೊಬೈಲ್ ಮೂಲಕ ತೆಗೆದಿದ್ದರು. ಇದರ ಬಗ್ಗೆ ನಮ್ಮ ಸಿಬ್ಬಂದಿಯಿಂದ ವರದಿಯನ್ನು ನಾನು ಪಡೆದುಕೊಂಡಿರಲಿಲ್ಲ.

ದಿನಾಂಕ 31.08.2019 ರಂದು ಚಾಸಾ-1 ರವರು ಠಾಣೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದೂರಿನ ಸಾರಂಶದ ಮೇರೆಗೆ ನಾನು ಪ್ರಕರಣವನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 01.09.2019 ರಂದು ನಿಪಿ-1 ರಂತೆ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೇ ಸರಿಯಲ್ಲ ಚಾಸಾ-4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಪತ್ತೆಗಾಗಿ ಚಾಸಾ- 6 ರವರನ್ನು ನೇಮಕ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-6 ಮತ್ತು 7 ರಂತೆ ಚಾಸಾ-6 ರವರಿಂದ ವರದಿಗಳನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ದಾಖಲಿಸುವುದಕ್ಕಿಂತ ಮುಂಚೆ ಆರೋಪಿತರು ದೂರುದಾರಳ ಕುಟುಂಬದ ವಿರುದ್ದ ದೂರನ್ನು ನೀಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರ ಮಾತನ್ನು ಕೆಳಿ ನಾನು ಆರೋಪಿತರ ವಿರುದ್ಧ ಸುಳ್ಳು ದೋಷಾರೋಪ ಪಟ್ಟಿಯನ್ನು ಸಲ್ಲಿಸಿರುತೇನೆಂದರೆ ಸರಿಯಲ್ಲ. ನಾನು ಠಾಣೆಯಲ್ಲ್ ಕುಳಿತು ದಾಖಲೆಗಳನ್ನು ಸೃಷ್ಟಿಪಡಿಸಿ ಸುಳ್ಳು ದೋಷಾರೋಪ ಪಟ್ಟಿಯನ್ನು ಸಲ್ಲಿಸಿರುತೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.